ಅಸಲು ದಾವಾ ಸಂಖ್ಯೆ 208/2018

ಡಿ ಡಬ್ಲ್ಯೂ: 1

**ದಿನಾಂಕ :** 02.04.2026 **ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ವಾದಿಗಳ ಪರವಾಗಿ ಶ್ರೀ ಬಿ ಪಿ ಕೆ ವಕೀಲರಿಂದಃ**

ಜಾನ್ ನನಗೆ ತಂದೆಯಾಗಬೇಕು. 1ನೇ ಪ್ರತಿವಾದಿ ನನ್ನ ಸಹೋದರ. ನನ್ನ ತಂದೆ ದಿನಾಂಕಃ 08.02.1974 ರಂದು ವಾದಿಯರ ತಂದೆ ಜ್ಞಾನಚಿಂತಾಮಣಿಯವರಿಗೆ ತಮ್ಮ ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ 1ನೇ ವಾದಿಯ ತಂದೆಗೆ ಕ್ರಯಕ್ಕೆ ಕೊಟ್ಟ ಸ್ವತ್ತಿನ ಒಂದು ಭಾಗವನ್ನು ವಾದಿಗೆ ದಾನಪತ್ರದ ಮೂಲಕ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿನಾಂಕಃ 08.02.1974 ರಂದು ನಾನು ಮತ್ತು 1ನೇ ಪ್ರತಿವಾದಿ ಅಪ್ರಾಪ್ತರಾಗಿದ್ದೆವು ಎಂದರೆ ಸರಿ. ನನ್ನ ತಂದೆ ನಮ್ಮಗಳ ಪರವಾಗಿ ಆ ಸಮಯದಲ್ಲಿ ಕ್ರಯಪತ್ರವನ್ನು ಜಾರಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 208/2018

ಡಿ ಡಬ್ಲ್ಯೂಃ 1

ನಾನು ಹಾಜರು ಪಡಿಸಿರುವ ನಿಡಿ–1 ಹಕ್ಕು ಬದಲಾವಣೆ ವಹಿ 2018 ನೇ ಸಾಲಿನದ್ದಾಗಿದ್ದು, ಆ ನಂತರದ ಯಾವುದೇ ದಾಖಲಾತಿಗಳನ್ನು ಹಾಜರು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಡಿ–2 ಪಹಣಿ ಪತ್ರಿಕೆ 2018ರದ್ದಾಗಿದ್ದು, ಅದಕ್ಕೂ ಮೊದಲು ಅಥವಾ ಆ ನಂತರದ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು, 2018 ನೇ ಸಾಲಿನಲ್ಲಿ ನಮ್ಮ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ಸಾಕ್ಷಿಯು ಈಗ 2 ಕೈಬರಹದ ಪಹಣಿ ಪತ್ರಿಕೆಗಳು ಹಾಗೂ 9 ಗಣಕೀಕೃತ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–28 ರಿಂದ ನಿಪಿ–39 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗಳನ್ನು ನೋಡಿ ಸಾಕ್ಷಿಯು ನಿಪಿ–28 ರಿಂದ ನಿಪಿ–30 ದಾಖಲಾತಿಗಳಲ್ಲಿ ನಮೂದು ಇದೆ ಎಂದರೆ ಸರಿ. ಹಾಗೂ ಅವು ನನ್ನ ತಂದೆಗೆ ಸೇರಿದ ದಾಖಲಾತಿಗಳು ಎಂದರೆ ಸರಿ. ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 100/3 ಸ್ವತ್ತಿನಲ್ಲಿ ಯಾವುದೇ ರೀತಿಲಯಾಗಿ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಪ್ರಸ್ತುತ ನಿವೇಶನಗಳಾಗಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಎಂದರೆ ಸರಿ.

ವಾದಿಯು ಹಾಜರು ಪಡಿಸಿರುವ ನಿಪಿ–11 ರಿಂದ ನಿಪಿ–16 ಛಾಯಚಿತ್ರಗಳಲ್ಲಿ ಕಾಣುತ್ತಿರುವ ಮನೆಗಳು ಹಾಗೂ ನಿವೇಶನಗಳು ಸರ್ವೆ ನಂಬರ್ 100/3 ರಲ್ಲಿ ಇರುವ ಮನೆ ಮತ್ತು ನಿವೇಶನ ಎಂದರೆ ಸರಿ. ಸರ್ವೆ ನಂಬರ್ 100/3 ಹಾಗೂ ದಾವಾ ಅನುಸೂಚಿತ ಸ್ವತ್ತುಗಳು ಒಂದೇ ಎಂದರೆ ಸರಿ.

ನನ್ನ ತಂದೆ 1974 ನೇ ಸಾಲಿನಲ್ಲಿ ಸ್ವತ್ತುಗಳನ್ನು ಮಾರಾಟ ಮಾಡಿದ್ದ ಸಂಗತಿ ನನಗೆ ಗೊತ್ತಿದ್ದರು ಸಹಾ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವತ್ತು ನಮಗೆ ಸೇರಿಲ್ಲ ಹಾಗೂ ಸ್ವತ್ತನ್ನು ಈಗಾಗಲೇ ಮಾರಾಟ ಮಾಡಲಾಗಿದೆ ಎಂಬ ಬಗ್ಗೆ ತಿಳುವಳಿಕೆ ಇದ್ದರೂ ಸಹಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ದಿನಾಂಕಃ 10.08.2018 ರಂದು ದಾವಾ ಆಸ್ತಿಯ ಬಳಿ ಹೋಗಿ ಅವರ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಯನ್ನುಂಟು ಮಾಡಿದ್ದೆ ಎಂದರೆ ಸರಿಯಲ್ಲ. ಆ ಸಂಬಂಧ ವಾದಿ ಮತ್ತು ಅವರಿಗೆ ಸಂಬಂಧಪಟ್ಟವರು ಪ್ರತಿರೋಧ ಒಡ್ಡಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದ ನಾನು ಪೊಲೀಸ್ ಠಾಣೆಗೆ ಹೋಗಿದ್ದೆ ಎಂದರೆ ಸರಿ.

ನನ್ನ ಪ್ರತಿವಾದಪತ್ರದಲ್ಲಿ, ಗ್ರಾಮದ ಮುಖಂಡರುಗಳನ್ನು ಕರೆಸಿ ಪಂಚಾಯತಿ ಮಾಡಿಸಿದ್ದೆ ಎಂಬುದಾಗಿ ಹೇಳಿರುತ್ತೇನೆ, ಯಾವ ದಿನಾಂಕದಂದು ಮತ್ತು ಯಾವ ಸ್ಥಳದಲ್ಲಿ ಪಂಚಾಯತಿ ಮಾಡಿಸಲಾಯಿತು ಎಂದರೆ ಸಾಕ್ಷಿಯು, ಗ್ರಾಮ ಪಂಚಾಯತಿ ಸದಸ್ಯರನ್ನು ಪಂಚಾಯತಿ ಮಾಡಲು

ಅಸಲು ದಾವಾ ಸಂಖ್ಯೆ 208/2018

ಡಿ ಡಬ್ಲ್ಯೂಃ 1

ಕರೆಸಿದ್ದೆ ಆದರೆ ಅವರು ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿಲ್ಲ ಎಂದರೆ ಸರಿ.

ವಾದಿಗೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು, ಅಧಿಕಾರ, ಸ್ವಾಧೀನ ಇದ್ದು, ನಾನು ನನ್ನ ಸ್ವಾಧೀನದಲ್ಲಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಪಹಣಿ ಪತ್ರಿಕೆ ಸ್ವತ್ತು ಪ್ರಸ್ತುತ ಜಮೀನಿನ ಸ್ವರೂಪದಲ್ಲಿ ಇರುವುದಿಲ್ಲ, ಲೇ ಔಟ್ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ